CW-01
PW-01

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು.**

ಎಸ್.ಸಿ. ಸಂಖ್ಯೆ: 127/2021

ದಿ. 24-09-2025

(ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು )

ಚಾಸಾ-01
ಪ್ರಾಸಾ-01

| | |
|---|---|
| ಸಾಕ್ಷಿದಾರರ ಹೆಸರು | ದೊಡ್ಡ ಹನುಮಂತರಾಯ |
| ತಂದೆಯ ಹೆಸರು | ವಂದ್ಲೆಪ್ಪ |
| ವಯಸ್ಸು | 50 ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸಸ್ಥಳ | ಮಾಚನೂರು |

**ಮುಖ್ಯ ವಿಚಾರಣೆ: ಸಾರ್ವಜನಿಕ ಅಭಿಯೋಜಕರಿಂದ:-**

1. ಚಾಸಾ-4 ನನ್ನ ತಮ್ಮ.

2. ಚಾಸಾ-5 ಚಾಸಾ-4 ಈತನ ಹೆಂಡತಿ.

3. ಚಾಸಾ-6 ನನ್ನ ಹೆಂಡತಿ.

4. ಚಾಸಾ-7 ನನ್ನ ಮಗಳು.

5. ಚಾಸಾ-2, 3 ಮತ್ತು 8 ರಿಂದ 10 ಸಹ ಗೊತ್ತು.

6. ಈಗ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರು ನನಗೆ ಗೊತ್ತು.

7. ಈಗ ಸುಮಾರು 5 ವರ್ಷಗಳ ಹಿಂದೆ ಒಂದು ದಿನ ಬೆಳಿಗ್ಗೆ 10-30 ರ ಸಮಯದಲ್ಲಿ ನಾನು ಮತ್ತು ಚಾಸಾ-4 ರಿಂದ 6 ನಮ್ಮ ಮನೆಯ ಬಳಿ ಇದ್ದಾಗ

CW-01
PW-01

ಒಬ್ಬ ಭೀಮೇಶ ತಂದೆ ಈರಣ್ಣ ಅಲ್ಲಿಗೆ ಬಂದು ನಮ್ಮೊಂದಿಗೆ ಜಗಳ ಕಾಯ್ದು ಸೂಳೇಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ.

8. ಅದು ಅಲ್ಲದೇ ಸದರಿ ಭೀಮೇಶ್ ಈತನು ಕಟ್ಟಿಗೆಯಿಂದ ನನ್ನ ತಲೆಗೆ ಮತ್ತು 2 ಮೊಣಕಾಲುಗಳಿಗೆ ಹೊಡೆದಿರುತ್ತಾನೆ.

9. ಆ ಸಮಯದಲ್ಲಿ 1 ನೇ ಆರೋಪಿತನು ಚಾಸಾ-4 ಈತನ ತಲೆಗೆ ಮತ್ತು ಬಲಗೈ ಬೆರಳಿಗೆ ಬಡಿಗೆಯಿಂದ ಹೊಡೆದಿರುತ್ತಾನೆ.

10. ಆಗ 2 ನೇ ಆರೋಪಿತನು ನಮಗೆ ಪ್ರಾಣದ ಬೆದರಿಕೆಯನ್ನು ಹಾಕಿರುತ್ತಾನೆ.

11. ಇನ್ನುಳಿದ ಆರೋಪಿತರು ಬಾಯಿಗೆ ಬಂದಂತೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ.

12. ಆ ಸಮಯದಲ್ಲಿ ಚಾಸಾ-5 ಮತ್ತು 6 ಇವರಿಗೆ 2 ನೇ ಆರೋಪಿತನು ಸೊಂಟಕ್ಕೆ ಒದ್ದು ಮರಿಯಾದೆಗೆ ಧಕ್ಕೆ ಬರುವ ರೀತಿಯಲ್ಲಿ ನಡೆದುಕೊಂಡಿರುತ್ತಾರೆ.

13. ಆಗ ನಾನು ನಂತರದಲ್ಲಿ ರಾಯಚೂರಿನ ರಿಮ್ಸ್ ಆಸ್ಪತ್ರೆಗೆ ಬಂದು ಒಳರೋಗಿಯಾಗಿ ದಾಖಲಾಗಿರುತ್ತೇನೆ.

14. ಸದರಿ ಆಸ್ಪತ್ರೆಗೆ ಪೊಲೀಸರು ಬಂದಿದ್ದು, ಅಲ್ಲಿ ನಾನು ನನ್ನ ಹೇಳಿಕೆ ಪಿರ್ಯಾದನ್ನು ಸಲ್ಲಿಸಿರುತ್ತೇನೆ.

CW-01
PW-01

15. ಸದರಿ ಪಿರ್ಯಾದನ್ನು ಈಗ ನೋಡಿ ಗುರುತಿಸುತ್ತಿರುವುದರಿಂದ ಅದನ್ನು ನಿಪಿ-1 ಎಂದು ಮತ್ತು ಅದರ ಮೇಲಿರುವ ನನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

16. ಆರೋಪಿತರು ನಮ್ಮ ಮೇಲೆ ಹಲ್ಲೆ ನಡೆಸಲು ಉಪಯೋಗಿಸಿದ 2 ಬಡಿಗೆಗಳನ್ನು ಈಗ ನೋಡಿ ಗುರುತಿಸುತ್ತಿರುವುದರಿಂದ ಅವುಗಳನ್ನು ಕ್ರಮವಾಗಿ ಮು.ಮಾ.1 ಮತ್ತು 2 ಎಂದು ಗುರುತಿಸಲಾಯಿತು.

**ಪಾಟೀ ಸವಾಲಃ ಶ್ರಿ ಎಸ್.ಕೆ.ಆರ್. ವಕೀಲರಿಂದ ಆರೋಪಿತರ ಪರವಾಗಿಃ**

17. ನಾವು ಮತ್ತು ಆರೋಪಿತರು ಕುಲಸ್ಥರು.

18. ಆರೋಪಿತರ ಜಮೀನು ಮತ್ತು ನಮ್ಮ ಜಮೀನು ಅಕ್ಕಪಕ್ಕದಲ್ಲಿ ಇರುತ್ತದೆ ಎಂಬುದು ಸರಿ.

19. ಮಾಡಗೇರೆ ಗ್ರಾಮದ ಸರ್ವೆ ನಂ.132, 6 ಎಕರೆ 8 ಗುಂಟೆ ಜಮೀನು 1 ನೇ ಆರೋಪಿತನಿಗೆ ಸಂಬಂಧಿಸಿದ್ದು ಇರುತ್ತದೆ ಎಂಬುದು ಸರಿ.

20. ಸದರಿ 1 ನೇ ಆರೋಪಿತನಿಗೆ ಸಂಬಂಧಿಸಿದಂತೆ ಮಾಚೋಳ್ಳಿ ಗ್ರಾಮದಲ್ಲಿ ಜಮೀನು ಇರುತ್ತದೆ ಎಂಬುದು ಸರಿ.

21. ಸದರಿ 1 ನೇ ಆರೋಪಿತನ 2 ಜಮೀನುಗಳು ಒಂದಕ್ಕೊಂದು ಹೊಂದಿಕೊಂಡು ಇರುತ್ತದೆ ಎಂಬುದು ಸರಿ.

22. ಸರ್ವೆ ನಂ.132 ರ ಬದುವಿನ ವಿಚಾರವಾಗಿ ಆರೋಪಿತರಿಗೂ ಮತ್ತು ನಮಗೂ ಮನಸಾ ಮನಸು ಸರಿ ಇರುವುದಿಲ್ಲ ಎಂಬುದು ಸರಿ.

CW-01
PW-01

23. ನನ್ನ 2 ನೇ ಹೆಂಡತಿಯಾದ ಈರಮ್ಮ ಹಾಗೂ ಆರೋಪಿತರು ಸಂಬಂಧಿಗಳು ಎಂದರೆ ದೂರದ ಸಂಬಂಧಿಗಳು ಎಂದು ಹೇಳುತ್ತೇನೆ.

24. ಘಟನೆ ನಡೆದ ದಿನಾಂಕ ನನಗೆ ಹೇಳಲು ಬರುವುದಿಲ್ಲ.

25. ಯಾವ ದಿನಾಂಕದಂದು ನಾಟಕವಾಡಿದ್ದು ಇರುತ್ತದೆ ಎಂಬುದು ನನಗೆ ಹೇಳಲು ಬರುವುದಿಲ್ಲ.

26. ಸದರಿ ನಾಟಕದಕಲ್ಲಿ ನಾವಾಗಲೀ ಆರೋಪಿತರಾಗಲೀ ಪಾತ್ರಧಾರಿಗಳು ಆಗಿರಲಿಲ್ಲ.

27. ನಾನಾಗಲೀ ಅಥವಾ ಆರೋಪಿತರಾಗಲೀ ನಾಟಕದ ವೇದಿಕೆಯ ಮೇಲೆ ಹೋಗಿರಲಿಲ್ಲ ಎಂಬುದು ಸರಿ.

28. ನಾಟಕವಾದ ಮಾರನೇ ದಿನ ಬೀಗರ ಮನೆಗೆ ಪರಸ್ಪರ ಊಟಕ್ಕೆ ಹೋಗೋದು ವಾಡಿಕೆಯಾಗಿರುತ್ತದೆ ಎಂಬುದು ಸರಿ.

29. ನಮ್ಮ ವಿರುದ್ದ ಆರೋಪಿತರು ಸಹ ಒಂದು ಎಸ್.ಸಿ.ನಂ.33/2021 ನ್ನು ಹೂಡಿರುತ್ತಾರೆ ಎಂಬುದು ಸರಿ.

30. ಆರೋಪಿತರು ನಾನು ಹೇಳಿದಂತೆ ನನ್ನ ಹೇಳಿಕೆಗಳನ್ನು ಬರೆದುಕೊಂಡಿರುತ್ತಾರೆ.

31. ಯಾವ ಭಾಷೆಯಲ್ಲಿ ಬರೆದುಕೊಂಡಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ.

32. ನಮ್ಮ ವಿರುದ್ಧ ಭೀಮೇಶ್ ತಂದೆ ಈರಣ್ಣ ಕ್ರಿಮಿನಲ್ ಪ್ರಕರಣವನ್ನು ಹೂಡಿರುತ್ತಾನೆ ಎಂಬುದು ಸರಿ.

CW-01
PW-01

33. ನಾವೇ ಆರೋಪಿತರಿಗೆ ಅಣ್ಣದ ಸೌಟು, ಎರಡು ಮಚ್ಚುಗಳು ಹಾಗೂ ಎರಡು ಬಡಿಗೆಗಳಿಂದ ಹಲ್ಲೆ ಮಾಡಿರುತ್ತೇವೆ ಎಂಬುದು ಸರಿಯಲ್ಲ.

34. 1 ನೇ ಆರೋಪಿತನ ಬೀಗರಾದ ವಂದಲಪ್ಪ ಮಾಲಗಿರಿ ಈತನ ಮನೆಗೆ ಹೋಗಬೇಕಾದರೆ ನಮ್ಮ ಮನೆಯ ಮುಂದಿನಿಂದಲೇ ಹಾಯ್ದು ಹೋಗಬೇಕಾಗುತ್ತದೆ ಎಂಬುದು ಸರಿ.

35. ನಮ್ಮ ಮನೆಯ ಪೂರ್ವಕ್ಕೆ ಉತ್ತರಕ್ಕೆ ಮತ್ತು ದಕ್ಷಿಣಕ್ಕೆ ರಸ್ತೆಗಳು ಇರುತ್ತವೆ ಎಂದರೆ ದಕ್ಷಿಣಕ್ಕೆ ಮಾತ್ರ ರಸ್ತೆ ಇರುತ್ತವೆ ಎಂದು ಹೇಳುತ್ತೇನೆ.

36. ಸದರಿ ಗಲಾಟೆ ನಮ್ಮ ಮನೆಯ ಪಶ್ಚಿಮದಲ್ಲಿ ಇರುವ ನಮ್ಮ ಜಾಗದಲ್ಲಿ ಆಗಿರುತ್ತದೆ.

37. ಸದರಿ ನಮ್ಮ ಮನೆಯ ಪೂರ್ವಕ ರಸ್ತೆಯ ಆಚೆಗೆ ಪಾರ್ವತಮ್ಮ, ಈರೇಶ್, ಶರಣಪ್ಪ ಮತ್ತು ಬಸವರಾಜ ಇವರ ಮನೆಗಳು ಇರುತ್ತವೆ ಎಂಬುದು ಸರಿಯಲ್ಲ.

38. ನಮ್ಮ ಪಶ್ಚಿಮಕ್ಕೆ ಬಸಯ್ಯ, ವಂದಲೆಪ್ಪ ಮತ್ತು ಮೂಕಯ್ಯ ಇವರ ಮನೆಗಳು ಇರುತ್ತದೆ ಎಂಬುದು ಸರಿ.

39. ಮಲ್ಲೇಶ ಮತ್ತು ಮಲ್ಲಯ್ಯ ಇವರ ಮನೆಗಳು ಸಹ ಪಶ್ಚಿಮಕ್ಕೆ ಇರುತ್ತದೆ ಎಂಬುದು ಸರಿಯಲ್ಲ.

40. ಪಶ್ಚಿಮದಲ್ಲಿ ಒಬ್ಬ ಬಸವರಾಜ ಮೂಲಗೆರಿ, ವಂದಲೇಪ್ಪ ಮುಲಗೆರಿ, ಮತ್ತು ಯಂಕಪ್ಪ ಮೂಲಗೆರಿ ಇವರ ಮನೆಗಳು ಇರುತ್ತದೆ ಎಂಬುದು ಸರಿ.

CW-01
PW-01

41. ಈಗ ಸುಮಾರು 5 ವರ್ಷಗಳ ಹಿಂದೆ ಒಂದು ದಿನ ಬೆಳಿಗ್ಗೆ 10-30 ರ ಸಮಯದಲ್ಲಿ ನಾನು ಮತ್ತು ಚಾಸಾ-4 ರಿಂದ 6 ನಮ್ಮ ಮನೆಯ ಬಳಿ ಇದ್ದಾಗ ಒಬ್ಬ ಭೀಮೇಶ ತಂದೆ ಈರಣ್ಣ ಅಲ್ಲಿಗೆ ಬಂದು ನಮ್ಮೊಂದಿಗೆ ಜಗಳ ಕಾಯ್ದು ಸೂಳೇಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ, ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

42. ಅದು ಅಲ್ಲದೇ ಸದರಿ ಭೀಮೇಶ್ ಈತನು ಕಟ್ಟಿಗೆಯಿಂದ ನನ್ನ ತಲೆಗೆ ಮತ್ತು 2 ಮೊಣಕಾಲುಗಳಿಗೆ ಹೊಡೆದಿರುತ್ತಾನೆ, ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

43. ಆ ಸಮಯದಲ್ಲಿ 1 ನೇ ಆರೋಪಿತನು ಚಾಸಾ-4 ಈತನ ತಲೆಗೆ ಮತ್ತು ಬಲಗೈ ಬೆರಳಿಗೆ ಬಡಿಗೆಯಿಂದ ಹೊಡೆದಿರುತ್ತಾನೆ, ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

44. ಆಗ 2 ನೇ ಆರೋಪಿತನು ನಮಗೆ ಪ್ರಾಣದ ಬೆದರಿಕೆಯನ್ನು ಹಾಕಿರುತ್ತಾನೆ, ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

45. ಇನ್ನುಳಿದ ಆರೋಪಿತರು ಬಾಯಿಗೆ ಬಂದಂತೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ, ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

46. ಆ ಸಮಯದಲ್ಲಿ ಚಾಸಾ-5 ಮತ್ತು 6 ಇವರಿಗೆ 2 ನೇ ಆರೋಪಿತನು ಸೊಂಟಕ್ಕೆ ಒದ್ದು ಮರಿಯಾದೆಗೆ ಧಕ್ಕೆ ಬರುವ ರೀತಿಯಲ್ಲಿ

ನಡೆದುಕೊಂಡಿರುತ್ತಾರೆ, ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

47. ಆಗ ನಾನು ನಂತರದಲ್ಲಿ ರಾಯಚೂರಿನ ರಿಮ್ಸ್ ಆಸ್ಪತ್ರೆಗೆ ಬಂದು ಒಳರೋಗಿಯಾಗಿ ದಾಖಲಾಗಿರುತ್ತೇನೆ, ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

48. ದಿಃ 21-02-2020 ರಂದು ನನ್ನ ಮರು ಹೇಳಿಕೆಯಲ್ಲಿ ಸ್ವಲ್ಪ ಭಾಗವನ್ನು ಈಗ ಓದಿ ಹೇಳಿದ್ದು, ಆ ಪ್ರಕಾರ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುವುದಿಲ್ಲ.

49. ಸದರಿ ಭಾಗವನ್ನು ಈಗ ನಿಡಿ-1 ಎಂದು ಗುರುತಿಸಲಾಯಿತು.

50. ನಿಪಿ-1 ಎಷ್ಟು ಪುಟ ಇರುತ್ತದೆ ಎಂಬುದು ನನಗೆ ಗೊತ್ತಿಲ್ಲ.

51. ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ.

52. ನಿಪಿ-1 ರಲ್ಲಿ ಬರೆದಿರುವ ಎಲ್ಲ ವಿಚಾರಗಳು ಸುಳ್ಳಿನಿಂದ ಕೂಡಿದ್ದು ಇರುತ್ತದೆ ಎಂಬುದು ಸರಿಯಲ್ಲ.

53. ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ವೈಷಮ್ಯ ಸಾಧಿಸುವ ಸುಳ್ಳು ದೂರನ್ನು ಸಲ್ಲಿಸಿರುತ್ತೇನೆಂಬುದು ಸರಿಯಲ್ಲ.

54. ಮು.ಮಾ.1 1 ನೇ ಆರೋಪಿ ಮು.ಮಾ.2 2 ನೇ ಆರೋಪಿತರ ಕೈಯಲ್ಲಿ ಇದ್ದವು.

55. ಆ ರೀತಿ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

CW-01
PW-01

56. ಜಮೀನಿನ ವಿಚಾರವಾಗಿ ಆರೋಪಿತರಿಗೂ ಮತ್ತು ನಮಗೂ ವೈಷಮ್ಯ ಇರುವುದರಿದಂದ ನಾವೇ ಅವರ ಮೇಲೆ ಕ್ರಿಮಿನಲ್ ಪ್ರಕರಣ ಹೂಡಿ ಸುಳ್ಳು ನುಡಿಯುತ್ತಿದ್ದೇನೆಂದು ಎಂದು ಸೂಚಿಸುವುದು ಸರಿಯಲ್ಲ.

57. ಸದರಿ ಆಸ್ಪತ್ರೆಗೆ ಪೊಲೀಸರು ಬಂದಿದ್ದು, ಅಲ್ಲಿ ನಾನು ನನ್ನ ಹೇಳಿಕೆ ಪಿರ್ಯಾದನ್ನು ಸಲ್ಲಿಸಿರುತ್ತೇನೆ, ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ, ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

58. ಆರೋಪಿತರು ನಮ್ಮ ಮೇಲೆ ಹಲ್ಲೆ ನಡೆಸಲು ಉಪಯೋಗಿಸಿದ್ದ 2 ಬಡಿಗೆಗಳನ್ನು ಈಗ ನೋಡಿ ಗುರುತಿಸುತ್ತಿದೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ಜಿ.ಡಿ.ಮಹಾವರ್ಕರ್)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ರಾಯಚೂರು.